**ಚಿತ್ರಪಟ ಕಥನ**

# ಜಾಣ ಕಾಗೆ 2024

**ಹೂಜಿಗೆ ಕಲ್ಲು ತುಂಬಿ, ತಳದಲ್ಲಿನ ನೀರನ್ನು ಮೇಲೆ ಬರಿಸಿಕೊಂಡು ದಾಹ ತಣಿಸಿಕೊಂಡ ಕಾಗೆ ಕಥೆ ನಿಮಗೆ ಗೊತ್ತು. ಇಲ್ಲಿನ ಚಿತ್ರಪಟಗಳು ಕಾಣಿಸುತ್ತಿರುವುದು ಕಥೆಯಲ್ಲ, ವಾಸ್ತವ!**

■ **ವಿಶ್ವನಾಥ ಸುವರ್ಣ**





ಹೂಜಿಯ ತಳದಲ್ಲಿದ್ದ ನೀರನ್ನು ಕುಡಿಯಲು ಕಾಗೆ ಮಾಡಿದ ಉಪಾಯದ ಕಥೆ ನಿಮಗೆ ಗೊತ್ತಲ್ಲ? ಒಂದೊಂದೇ ಕಲ್ಲನ್ನು ಹೆಕ್ಕಿತಂದ ಕಾಗೆ, ಆ ಕಲ್ಲುಗಳನ್ನು ಹೂಜಿಗೆ ಹಾಕುತ್ತದೆ. ಹೂಜಿಯಲ್ಲಿ ಕಲ್ಲುಗಳು ತುಂಬಿಕೊಂಡು ತಳದಲ್ಲಿದ್ದ ನೀರು ಮೇಲಕ್ಕೆ ಬರುತ್ತದೆ. ಇದು, ತಲೆಮಾರುಗಳಿಂದ ನಮ್ಮ ನಡುವೆ ಅನುರಣನಗೊಳ್ಳುತ್ತಿರುವ ಕಥೆ.

ಪಠ್ಯಗಳಲ್ಲಿ ಕಥೆಯ ರೂಪದಲ್ಲಿ, ಕವಿತೆಯ ರೂಪದಲ್ಲಿ ಸೇರ್ಪಡೆಗೊಂಡು ವಿದ್ಯಾರ್ಥಿಗಳಿಗೆ ಕಲಿಕೆಯ ರೂಪದಲ್ಲೂ ‘ಜಾಣ ಕಾಗೆ’ ಆಪ್ತವಾಗಿತ್ತು. ಕಾಗೆಯ ಜಾಣತನ, ಗ್ರಾಫಿಕ್ಸ್ ರೂಪದಲ್ಲಿ ಡಿಜಿಟಲ್ ಜಗತ್ತನ್ನೂ ಪ್ರವೇಶಿಸಿದೆ. ಇದೆಲ್ಲವೂ ಗದ್ಯ–ಪದ್ಯದ–ಬಿಂಬಗಳಡಮಾತಾಯಿತು. ಕಥೆಯಲ್ಲಿನ ಜಾಣ ಕಾಗೆಯನ್ನು ನೀವೆಲ್ಲಾದರೂ ನಿಜ ಜೀವನದಲ್ಲಿ ಕಂಡಿದ್ದೀರಾ?

ಬೇಸಿಗೆಯ ಧಗೆ ನಾಡನ್ನೆಲ್ಲ ಆವರಿಸಿಕೊಂಡಿದ್ದು, ಹಲವೆಡೆ ಕುಡಿಯುವ ನೀರಿಗೂ ತತ್ವಾರ ಒದಗಿದೆಯಷ್ಟೇ. ದಾಹದಿಂದ ಜನರೇ ತತ್ತರಿಸುತ್ತಿರುವ ಸಂದರ್ಭದಲ್ಲಿ ಪ್ರಾಣಿ–ಪಕ್ಷಿಗಳ ಪಾಡು ಮತ್ತಷ್ಟು ಘೋರ. ಮನೆಯ ಅಂಗಳ–ತಾರಸಿಗಳಲ್ಲಿ ಬಟ್ಟಲುಗಳಲ್ಲಿ ನೀರಿಡುವ ಪಕ್ಷಿಪ್ರೇಮಿಗಳ ಕಾಳಜಿಯ ನಡುವೆಯೂ, ನೀರಿಗಾಗಿ ಅಲೆಯುವ ಪಕ್ಷಿ–ಪ್ರಾಣಿಗಳ ಪಡಿಪಾಟಲಿನ ತೀವ್ರತೆಯೇನೂ ಕಡಿಮೆಯಾಗಿಲ್ಲ.

ಇತ್ತೀಚೆಗೆ ಹೀಗಾಯಿತು. ಬೆಂಗಳೂರಿನ ಕಬ್ಬನ್ ಉದ್ಯಾನದಲ್ಲಿನ ‘ಪ್ರೆಸ್ ಕ್ಲಬ್’ ಆವರಣದಲ್ಲಿ ಕಾಗೆಯೊಂದು ಕಾಣಿಸಿಕೊಂಡಿತು. ದಾಹದಿಂದ ಕಂಗೆಟ್ಟಿದ್ದ ಆ ಕಾಗೆಗೆ ಮಡಕೆಯೊಂದು ಕಣ್ಣಿಗೆ ಬಿತ್ತು.